

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಶರೀರ ಸೌಂದರ್ಯ v/s ಆತ್ಮ ಸೌಂದರ್ಯ....

**ಕೆ**ಲವು ವರ್ಷಗಳ ಹಿಂದೆ ದೂರದರ್ಶನದಲ್ಲಿ ಒಂದು ರೋಚಕವಾದ ಜಾಹೀರಾತು ಬರುತ್ತಿತ್ತು. ಅದು ಈಗ ನಿಂತು ಹೋಗಿದೆ. ಪತ್ರಿಕೆಗಳಲ್ಲಿ ಮತ್ತು ದೂರದರ್ಶನದಲ್ಲಿ ಬರುವ ಈ ಜಾಹೀರಾತುಗಳ ಬಗ್ಗೆ ಅಷ್ಟಾಗಿ ಯಾರೂ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಮಾರುಕಟ್ಟೆಯಲ್ಲಿ ಯಾವುದೋ ಒಂದು ವಸ್ತುವಿನ ಪ್ರಚಾರಕ್ಕಾಗಿ ಪದೇ ಪದೇ ಪ್ರದರ್ಶಿತವಾಗುವ ಈ ಜಾಹೀರಾತುಗಳು ನೋಡುಗರಿಗೆ ಒಂದು ರೀತಿಯಲ್ಲಿ ಕಿರಿ ಕಿರಿ ಉಂಟುಮಾಡುವುದಲ್ಲದೆ ಅವಜ್ಞೆಗೆ ಗುರಿಯಾಗಿರುತ್ತವೆ. ಆದರೆ ಅವುಗಳಲ್ಲಿ ಕೆಲವು ತುಂಬಾ ಆಕರ್ಷಕ ಹಾಗೂ ಅರ್ಥಪೂರ್ಣವಾಗಿರುತ್ತವೆ. ಅಂತಹ ಜಾಹೀರಾತುಗಳಲ್ಲಿ ಒಂದು ನಿಮಗೆ ನೆನಪಿರಬಹುದು: ಮೊದಲನೆಯ ಮಹಡಿಯಲ್ಲಿ ವಾಸವಾಗಿದ್ದ ಒಬ್ಬ ಮಧ್ಯವಯಸ್ಸಿನ ಮಹಿಳೆ ಒಲೆಯ ಮೇಲೆ ಕುದಿಯಲು ಏನನ್ನೋ ಇಟ್ಟು ಸೊಂಟಕ್ಕೆ ಸೆರಗನ್ನು ಸಿಕ್ಕಿಸಿಕೊಂಡು, ತಲೆಗೂದಲನ್ನು ಹಿಂದಕ್ಕೆ ಸರಿಸಿ ಮುಡಿಯನ್ನು ಕಟ್ಟಿಕೊಳ್ಳುತ್ತಾ ಬಾಲ್ಕನಿಗೆ ಬಂದು ರಸ್ತೆಯನ್ನು ದಿಟ್ಟಿಸಿ ನಿಲ್ಲುತ್ತಾಳೆ. ಬೆಳಗಿನ ಹೊತ್ತು; ಮಕ್ಕಳು ಶಾಲೆಗೆ ಹೋಗುವ ಸಮಯ. ಪಕ್ಕದ ಮನೆಯ ಶಾಲಾ ಬಾಲಕ ಪುಸ್ತಕಗಳ ಬ್ಯಾಗನ್ನು ಹಮಾಲರು ಮೂಟೆ ಹೊತ್ತುಕೊಳ್ಳುವಂತೆ ಬೆನ್ನ ಮೇಲೆ ಹೊತ್ತುಕೊಂಡು, ಕೊರಳಲ್ಲಿ ಕುಡಿಯುವ ನೀರಿನ ಬಾಟಲಿಯನ್ನು ಸಿಕ್ಕಿಸಿಕೊಂಡು, ಕೈಯಲ್ಲಿ ಮಧ್ಯಾಹ್ನದ ಊಟಕ್ಕೆ ಟಿಫನ್ ಕ್ಯಾರಿಯರ್ ಹಿಡಿದುಕೊಂಡು ಕುಣಿದು ಕುಪ್ಪಳಿಸುತ್ತಾ ದಡದಡನೆ ಮಹಡಿಯ ಮೆಟ್ಟಲುಗಳನ್ನು ಇಳಿಯತೊಡಗುತ್ತಾನೆ. ಬಾಲ್ಕನಿಯಲ್ಲಿ ನಿಂತಿದ್ದ ಆ ಪರಿಚಿತ ಮಹಿಳೆಯನ್ನು ನೋಡಿ "Hello! Aunty!" ಎಂದು ಕೈಬೀಸಿ ಉತ್ತರಕ್ಕೂ ಕಾಯದೆ ಶಾಲೆಗೆ ಓಡುತ್ತಾನೆ. ಅದರಿಂದ ಮುಂದೆ ಆದ ಅನಾಹುತವೇನು?

ಆ ಹುಡುಗ ಅವಳನ್ನು 'ಆಂಟಿ' ಎಂದು ಕರೆದಿದ್ದಕ್ಕೆ ಆ ಮಹಿಳೆಯ ಮುಖ ಪೇಲವವಾಗುತ್ತದೆ! ತನಗೆ ಅಷ್ಟೊಂದು ವಯಸ್ಸಾಗಿದೆಯೇ ಎಂದು ಗಲಿಬಿಲಿಗೊಂಡು ಮನೆಯೊಳಗೆ ಹೋಗಿ ಕನ್ನಡಿಯ ಮುಂದೆ ನಿಂತು ತನ್ನ ಮುಖವನ್ನು ನೋಡಿಕೊಳ್ಳುತ್ತಾಳೆ. ತಲೆಯಲ್ಲಿ ಒಂದೆರಡು ಕೂದಲು ಬೆಳ್ಳಗಾಗಿರುವುದನ್ನು ಕಂಡು ಬೆಚ್ಚಿಬೀಳುತ್ತಾಳೆ. ಅಡುಗೆ ಮಾಡುವುದನ್ನು ಬಿಟ್ಟು ಲಗುಬಗನೆ ವೈದ್ಯರ ಹತ್ತಿರ ಹೋಗುತ್ತಾಳೆ. ಉಸ್ಸೆಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾಳೆ. ಮೇಲೆ ಫ್ಯಾನ್ ಗಿರಗಿರನೆ ಸುತ್ತುತ್ತಿರುತ್ತದೆ! ಇಲ್ಲಿ ಜಾಹೀರಾತು ನಿರ್ದೇಶಕನ ಬುದ್ಧಿವಂತಿಕೆಯನ್ನು ಮೆಚ್ಚಬೇಕು. ಆ ಫ್ಯಾನ್ ತಿರುಗುವುದಕ್ಕೂ ಮತ್ತು ಆಕೆಯ ಮನಃಸ್ಥಿತಿಗೂ ಒಂದು ಹೋಲಿಕೆ ಇದೆ. ಆ ಹುಡುಗನ ಬಾಯಿಂದ 'ಆಂಟಿ' ಎಂದು ಕೇಳಿದ ಕ್ಷಣದಿಂದ ಆ ಮಹಿಳೆಗೆ ತಲೆ ಸುತ್ತು ಬಂದು ಆ ಫ್ಯಾನಿನಂತೆ ಗಿರಗಿರನೆ ಸುತ್ತುತ್ತಿದೆಯೆಂಬ ಸಾಂಕೇತಿಕ ಅರ್ಥ (symbolic meaning) ಅದರಲ್ಲಿ ಅಡಗಿದೆ. ಎದುರಿಗಿದ್ದ ಮಹಿಳಾ ವೈದ್ಯೆ ಮಂದಹಾಸ ಬೀರುತ್ತಾ "Don't worry madam" ಎಂದು ಆ ಗೃಹಿಣಿಯನ್ನು ಸಂತೈಸುತ್ತಾಳೆ. ಟೇಬಲ್ ಡ್ರಾದಿಂದ 'ಗೋದ್ರೇಜ್' ಕಂಪನಿಯ ಹೇರ್ ಡೈ (Goderej Hair Dye) ಡಬ್ಬಿಯನ್ನು ಹೊರತೆಗೆದು ಆ ಗೃಹಿಣಿಗೆ ಕೊಟ್ಟು ಅದರಲ್ಲಿರುವ ಬಣ್ಣವನ್ನು ಬೆಳ್ಳಗಾದ ತಲೆಗೂದಲಿಗೆ ಹಚ್ಚಿಕೊಳ್ಳಲು ಹೇಳುತ್ತಾಳೆ. ಗೃಹಿಣಿಯು ಸಮಾಧಾನದ ನಿಟ್ಟುಸಿರುಬಿಡುತ್ತಾಳೆ. ಮನೆಗೆ ಹಿಂತಿರುಗಿ ಕನ್ನಡಿಯ ಮುಂದೆ ಕುಳಿತು ಮಹಿಳಾವೈದ್ಯೆ ಹೇಳಿದಂತೆ ತಲೆಯಲ್ಲಿರುವ ಬಿಳಿಗೂದಲುಗಳಿಗೆ ಕಪ್ಪು ಬಣ್ಣ ಹಚ್ಚಿ, ಹಣೆಯ ಮೇಲೆ ತಿಲಕವನ್ನಿಟ್ಟುಕೊಳ್ಳುತ್ತಾಳೆ. ಸಂಜೆಯಾಗುತ್ತದೆ. ಜರತಾರಿ ಸೀರೆಯನ್ನುಟ್ಟು ನವವಧುವಿನಂತೆ ಶೃಂಗಾರ ಮಾಡಿಕೊಂಡು ನಗುಮುಖ ಹೊತ್ತು ಮತ್ತೆ ಬಾಲ್ಕನಿಗೆ ಬಂದು ನಿಲ್ಲುತ್ತಾಳೆ.

ಆಫೀಸಿಗೆ ಹೋಗಿದ್ದ ಗಂಡ ದಣಿದು ಮನೆಗೆ ಬರುತ್ತಾನೆ. ದಿನವೂ ತನ್ನ ನಿರೀಕ್ಷೆಯಲ್ಲಿರುತ್ತಿದ್ದ ಹೆಂಡತಿ ಆ ದಿನ ವಿಶೇಷವಾಗಿ ಅಲಂಕಾರಮಾಡಿಕೊಂಡಿರುವುದನ್ನು ನೋಡಿ ಆವನಿಗೆ ಏಕಕಾಲದಲ್ಲಿ ಆಶ್ಚರ್ಯ ಮತ್ತು ಸಂತೋಷ ಎರಡೂ ಉಂಟಾಗುತ್ತವೆ. ಅವಳ ಹತ್ತಿರ ಬಂದು ಏನು ವಿಶೇಷವೆಂದು ಕೇಳುವಷ್ಟರಲ್ಲಿ ಶಾಲೆಗೆ ಹೋಗಿದ್ದ ಪಕ್ಕದ

ಮನೆ ಹುಡುಗ ವಾಪಾಸ್ ಬರುತ್ತಾನೆ. ಮಹಡಿಯ ಮೆಟ್ಟಲುಗಳನ್ನು ಮೇಲೇರುತ್ತಾ ಪುನಃ ಆ ಮಹಿಳೆಯನ್ನು ನೋಡಿ ಬೆಳಿಗ್ಗೆ ಹೇಳಿದಂತೆ 'ಆಂಟಿ' ಎನ್ನದೆ 'ಹಲೋ ಅಂಜಲಿ ದೀದೀ' ಎಂದು ಕೈಬೀಸಿ ಪಕ್ಕದಲ್ಲಿದ್ದ ಆಕೆಯ ಗಂಡನನ್ನು ನೋಡಿ "Hello Uncle" ಎನ್ನುತ್ತಾನೆ. ಬೆಳಿಗ್ಗೆ 'ಆಂಟಿ' ಎಂದ ಆ ಹುಡುಗ ಈಗ 'ದೀದೀ' (ಅಕ್ಕ) ಎಂದು ಕರೆದಿದ್ದಕ್ಕೆ ಆ ಮಹಿಳೆಗೆ ಒಳಗೊಳಗೆ ಬಹಳ ಖುಷಿಯಾಗುತ್ತದೆ. ಆದರೆ ಆಕೆಯ ಗಂಡನಿಗೆ ಮಾತ್ರ 'ಅಂಕಲ್' ಎಂದು ಕರೆದಿದ್ದರಿಂದ ಮನಸ್ಸಿಗೆ ಕಸಿವಿಸಿಯಾಗುತ್ತದೆ. ಗಂಡ ಮುಖ ಕಿವಿಚಿಕೊಳ್ಳುವುದನ್ನು ನೋಡಿ ಹೆಂಡತಿ ಮುಸಿಮುಸಿ ನಗುತ್ತಾಳೆ! ಆಕೆ ಮುಂದೇನು ಮಾಡಿರಬಹುದು? ಓದುಗರ ಊಹೆಗೆ ಬಿಟ್ಟ ವಿಚಾರ...

ಅನೇಕ ಗಂಡಸರು ಇಂದು ತಮ್ಮ ತಲೆಗೂದಲಿಗೆ ಮತ್ತು ಮೀಸೆಗೆ ಬಣ್ಣ ಹಚ್ಚಿಕೊಂಡಿರುವುದನ್ನು ಕಾಣಬಹುದು. ಕೆಲವೊಮ್ಮೆ ಮೀಸೆ ಬುಡದಲ್ಲಿ ಬೆಳ್ಳಗೆ, ಮೇಲೆ ಕಪ್ಪಾಗಿ ಅಕರಾಳ ವಿಕರಾಳವಾಗಿ ಕಾಣಿಸುತ್ತಾರೆ. ಹೆಣ್ಣಿರಲಿ, ಗಂಡಿರಲಿ ಪ್ರತಿಯೊಬ್ಬ ವ್ಯಕ್ತಿಯೂ ತಾನು ಇನ್ನೊಬ್ಬರಿಗೆ ಸುಂದರವಾಗಿ ಕಾಣಿಸಿಕೊಳ್ಳಬೇಕೆಂದು ಹಪಹಪಿಸುತ್ತಾನೆ. ಹೀಗೆ ನೋಡಲು ಸುಂದರವಾಗಿ ಕಾಣಿಸಿಕೊಳ್ಳಬೇಕೆಂದು ಬಯಸುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಅದಕ್ಕಿಂತ ಮುಖ್ಯವಾಗಿ ವ್ಯಕ್ತಿ ತನ್ನೊಳಗೆ ಸುಂದರವಾಗಿರಬೇಕು. ಅದೇ ಆತ್ಮಸೌಂದರ್ಯ.

**ಕಾಯ ಕರ್ರನೆ ಕಂದಿದಡೇನಯ್ಯಾ**
**ಕಾಯ ಮಿರ್ರನೆ ಮಿಂಚಿದಡೇನಯ್ಯಾ**
**ಅಂತರಂಗ ಶುದ್ಧವಾದ ಬಳಿಕ**
**ಚೆನ್ನಮಲ್ಲಿಕಾರ್ಜುನಯ್ಯಾ**
**ನೀನೊಲಿದ ಕಾಯವು ಹೇಗಿದ್ದಡೇನಯ್ಯಾ**

ಎನ್ನುತ್ತಾಳೆ ಅಕ್ಕಮಹಾದೇವಿ. ಯುವ ವಯಸ್ಸಿನಲ್ಲಿ ಅಕ್ಕಮಹಾದೇವಿ ಸಾಧಿಸಿದ ಆಧ್ಯಾತ್ಮಿಕ ಔನ್ನತ್ಯ ಮೇರುಸದೃಶವಾದುದು. 'ಲಿಂಗಪತಿ'ಯಾದ ಪರಮಾತ್ಮನು ಒಲಿಯುವುದು 'ಶರಣಸತಿ'ಯಾದ ಭಕ್ತನ ಆತ್ಮಸೌಂದರ್ಯವನ್ನೇ ಹೊರತು ಶರೀರ ಸೌಂದರ್ಯವನ್ನಲ್ಲ. ಅಂತಹ ಸಾಧನೆಯನ್ನು ಸಾಮಾನ್ಯರಿಂದ ಮಾಡಲಾಗದಿದ್ದರೂ ವಯಸ್ಸು ಕಳೆದಂತೆ ಮನಸ್ಸು ಮಾಗಬೇಕು. ಕೆಲವರು ವಯಸ್ಸಾದ ಮಹಿಳೆಯರು ಮದುವೆ ಮನೆ ಮತ್ತಿತರ ಸಭೆ-ಸಮಾರಂಭಗಳಲ್ಲಿ ದೊಡ್ಡಸ್ತಿಕೆಗೆ ಮೈತುಂಬಾ ಆಭರಣಗಳನ್ನು ಹಾಕಿಕೊಂಡಿರುತ್ತಾರೆ. ಅಂಥವರನ್ನು ಕುರಿತೇ ಹಿಂದಿಯಲ್ಲಿ ಒಂದು ಗಾದೆ ಮಾತಿದೆ: 'ಬೂಢೀ ಘೋಡೀ ಲಾಲ್ ಲಗಾಮ್'. ಮುದಿ ಕುದುರೆಗೆ ಕೆಂಬಣ್ಣದ ಲಗಾಮು! ಓಡಲು ಶಕ್ತಿಯಿಲ್ಲದ ವಯಸ್ಸಾದ ಕುದುರೆಗೆ ಯಾವ ಲಗಾಮು ಹಾಕಿ ಏನು ಪ್ರಯೋಜನ?

ಸಾತ್ವಿಕತೆಯೇ ಮೈವೆತ್ತ ಓರ್ವ ನಿರಾಭರಣ ಸುಂದರಿ ಇದ್ದಳು. ಬಹಳ ಸುಂದರವಾಗಿ ಕಾಣುತ್ತಿದ್ದ ಆ ಮಹಿಳೆಯನ್ನು ಅವಳ ಗೆಳತಿ ಪ್ರಶ್ನಿಸಿದಳು. ಇಷ್ಟೊಂದು ಚೆಲುವೆಯಾಗಿರುವ ನೀನು ಬಳಸುತ್ತಿರುವ Cosmetics ಯಾವುದು? ಅದಕ್ಕೆ ಆ ಮಹಿಳೆ ನೀಡಿದ ಉತ್ತರ ತುಂಬಾ ಮಾರ್ಮಿಕವಾಗಿದೆ:

I use for my lips, truth,
for my voice, prayer
for my eyes, pity
for my hands, charity
for my figure, uprightness
and for my heart, love!

ಆಕೆ ತನ್ನ ತುಟಿಗಳಿಗೆ ಬಳಸಿದ್ದು ಲಿಪ್‌ಸ್ಟಿಕ್ ಅಲ್ಲ, ಸತ್ಯ, ತನ್ನ ಕಂಠಕ್ಕೆ ನೆಕ್ಲೇಸ್ ಅಲ್ಲ, ಪ್ರಾರ್ಥನೆ, ತನ್ನ ಕಣ್ಣುಗಳಿಗೆ ಕಾಡಿಗೆಯಲ್ಲ, ದಯೆ, ತನ್ನ ಕೈಗಳಿಗೆ ಮೆಹಂದಿ ಅಲ್ಲ, ದಾನ ಧರ್ಮ, ತನ್ನ ಆಕಾರಕ್ಕೆ ಸನ್ನಡತೆ ಮತ್ತು ತನ್ನ ಹೃದಯಕ್ಕೆ ಪ್ರೀತಿ. ಈ ಆಧ್ಯಾತ್ಮಿಕ ಸೌಂದರ್ಯ ಪ್ರಸಾಧನಗಳು (spiritual cosmetics) ಪ್ಯಾರಿಸ್ ನಗರದ ವಿಮಾನ ನಿಲ್ದಾಣದಲ್ಲಿ ಹುಡುಕಿದರೆ ಸಿಗಲು ಸಾಧ್ಯವೇ? ನೀವು ಮನಸ್ಸು ಮಾಡಿದರೆ ನಿಮ್ಮೊಳಗೇ ಹೇರಳವಾಗಿ ದೊರೆಯಬಲ್ಲವು. ಅವುಗಳನ್ನು ಪಡೆಯಲು ಬೇಕಾಗಿರುವುದು ಹಣವಲ್ಲ; ಆಧ್ಯಾತ್ಮಿಕ ಚಿಂತನೆ ಮತ್ತು ಸಾಧನೆ.

ಶರೀರ-ಸೌಂದರ್ಯಕ್ಕಿಂತ ಆತ್ಮ-ಸೌಂದರ್ಯವೇ ಸೌಂದರ್ಯ. ಆತ್ಮ ಸೌಂದರ್ಯದ ಮುಂದೆ ಶರೀರ ಸೌಂದರ್ಯ ಕಳಾಹೀನ. ಆತ್ಮ ಸೌಂದರ್ಯ ಅಕ್ಷಯ, ನಿತ್ಯನೂತನ, ತ್ರಿಕಾಲಾಬಾಧಿತ. ಆದರೆ ಶರೀರ ಸೌಂದರ್ಯ ಹಾಗಲ್ಲ. ಅದು ಕ್ಷಯ, ಕೃತ್ರಿಮ ಹಾಗೂ ಕಾಲಾಧೀನ. ಶರೀರವನ್ನು ಸುಗಂಧ ದ್ರವ್ಯಾದಿ ಸೌಂದರ್ಯಪ್ರಸಾಧನಗಳಿಂದ ಲೇಪಿಸುವುದರಿಂದಾಗಲೀ, ಮಿಂದು ಮಡಿಯುಟ್ಟು ವಿಭೂತಿ ರುದ್ರಾಕ್ಷಿ ಧರಿಸುವುದರಿಂದಾಗಲೀ ಈ ಆತ್ಮ

ಸೌಂದರ್ಯವನ್ನು ಪಡೆಯಲು ಸಾಧ್ಯವಿಲ್ಲ. ಬಾಹ್ಯ ಪರಿಕರಗಳಿಂದ ಬಾಹ್ಯಶುದ್ಧಿ, ಬಾಹ್ಯ ಸೌಂದರ್ಯವರ್ಧನೆಯುಂಟಾಗುತ್ತದೆಯೇ ಹೊರತು, ಅಂತಃಶುದ್ಧಿ, ಅಂತರಾತ್ಮ ಸೌಂದರ್ಯ ವರ್ಧನೆಯಾಗುವುದಿಲ್ಲ, ಆತ್ಮ ಸೌಂದರ್ಯಕ್ಕೆ ಅಂತರಂಗ ಶುದ್ಧಿ ಬೇಕು. ಹೀಗೆಂದಾಕ್ಷಣ ಶರೀರದ ಬಾಹ್ಯಶುದ್ಧಿಗೆ ಬೆಲೆಯೇ ಇಲ್ಲವೆಂದರ್ಥವಲ್ಲ. ಶರೀರ ಕೊಳಕಾಗಿದ್ದರೆ ಅದರ ಸಂಸರ್ಗದೋಷದಿಂದ ಮನಸ್ಸೂ ಕೊಳಕಾಗುವ ಸಾಧ್ಯತೆ ಇದೆ. ಶರೀರವು ದುರ್ಗಂಧದಿಂದ ಕೂಡಿದ್ದರೆ ಮನಸ್ಸು ಲವಲವಿಕೆಯಿಂದಿರುವುದಿಲ್ಲ. ಆದ್ದರಿಂದ ಬಾಹ್ಯಶುದ್ಧಿಯು ಆಂತರಿಕ ಶುದ್ಧಿಗೆ ಪೋಷಕ, ಸಹಾಯಕ. ಆದರೆ ಅಂತರಂಗ ಶುದ್ಧಿಯನ್ನು ಸಾಧಿಸದ ಬಾಹ್ಯ ಶುದ್ಧಿಯು ನಿಷ್ಪ್ರಯೋಜಕ.

***ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ?***
***ಅಘೋರ ತಪವ ಮಾಡಿದೊಡೇನು?***
***ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ***
***ಕೂಡಲಸಂಗಮ ದೇವ?***

ಎನ್ನುತ್ತಾರೆ ಬಸವಣ್ಣನವರು. ಹುತ್ತದೊಳಗೆ ಹಾವು ಸೇರಿಕೊಂಡಿರುತ್ತದೆ. ಹುತ್ತವನ್ನು ಹೊಡೆಯುವುದರಿಂದ ಹಾವು ಹೊರಗೆ ಬರಬಹುದು. ಆದರೆ ಹುತ್ತವನ್ನು ಹೊಡೆದ ಮಾತ್ರಕ್ಕೇ ಹಾವು ಸಾಯುವುದಿಲ್ಲ. ಹಾಗೇನೆ ಕೇವಲ ಯಾಂತ್ರಿಕವಾಗಿ ಮಾಡುವ ಜಪತಪಾದಿಗಳಿಂದ ಮನಸ್ಸೆಂಬ ಹುತ್ತದೊಳಗೆ ಅಡಗಿ ಕುಳಿತಿರುವ ವಿಷಯವಾಸನೆಯೆಂಬ ದುಷ್ಟಸರ್ಪ ಸಾಯುವುದಿಲ್ಲ. ಅದನ್ನು ಹೊರಗೆಳೆದು ಹೊಡೆಯಬೇಕು.

ಪತಂಜಲಿ ಮಹರ್ಷಿಗಳು ಶರೀರ ಮತ್ತು ಆತ್ಮದ ಸಂಸರ್ಗಕ್ಕೆ 'ಅಭಿನಿವೇಶ' ಎಂದು ಕರೆಯುತ್ತಾರೆ **(ಸ್ವರಸವಾಹೀ ವಿದುಷೋಽಪಿ ತಥಾರೂಢೋಽಭಿನಿವೇಶಃ - ಯೋಗಸೂತ್ರ 2.9).** ದೀರ್ಘಕಾಲದ ಒಡನಾಟದಿಂದ ಒಂದು ವಸ್ತುವಿನ ಮೇಲೆ ಹೇಗೆ ಮೋಹ ಉಂಟಾಗುತ್ತದೆಯೋ ಹಾಗೆ ಮನುಷ್ಯನಿಗೆ ಈ ಶರೀರದ ಮೇಲೆ ಮೋಹ ಉಂಟಾಗುತ್ತದೆ. ಉದಾಹರಣೆಗೆ ಮನೆಯೊಳಗೆ ಗೃಹಿಣಿಯರು ಕಸಗುಡಿಸಲು ಬಳಸುವ ಒಂದು ಕಸಬರಿಕೆ. ನಿತ್ಯವೂ ಬಳಸಿ ಬಳಸಿ ಸವೆದು ಹೋದ ಆ ಕಸಬರಿಕೆಯನ್ನು ಮಗಳು ತಿಪ್ಪೆಗೆ ಎಸೆಯಲು ಹೋದರೆ ತಾಯಿ ಮಗಳಿಗೆ ಗದರಿಸುತ್ತಾಳೆ. 'ಅದೇನು ನಿನಗೆ ತೊಂದರೆ ಮಾಡುತ್ತದೆ ಅಂತ ಎಸೆಯುತ್ತಿದ್ದೀಯಾ?' ಎಂದು ಸಿಟ್ಟಿನಿಂದ ಕಸಿದುಕೊಳ್ಳುತ್ತಾಳೆ. ಬೀಗರು ಬಂದರೆ ಬಾಗಿಲ ಮೂಲೆಯಲ್ಲಿ ಅದನ್ನು ಬಚ್ಚಿಡುತ್ತಾಳೆ. ಅದೇ ಮನೆಯ ಯಜಮಾನ ಸತ್ತರೆ ಹೆಣವನ್ನು ಎತ್ತುವಾಗ ಮನೆಯ ಮೂಲೆಯಲ್ಲಿ ಬಚ್ಚಿಡಲು ಮುಂದಾಗುವುದಿಲ್ಲ. ಈ ಶರೀರದೊಳಗೆ ಆತ್ಮ ಇರುವವರೆಗೆ ಮಾತ್ರ ಮನುಷ್ಯನಿಗೆ ಬೆಲೆ. ಇಲ್ಲದಿದ್ದರೆ ಮನೆಯ ಮೂಲೆಯಲ್ಲಿರುವ ಕಸಬರಿಕೆಗಿಂತಲೂ ಕಡೆ!

ಶರೀರದ ಮೇಲಿನ ಮೋಹದ ವಿಚಾರವಾಗಿ ಪುರಾಣಗಳಲ್ಲಿ ಒಂದು ರೋಚಕವಾದ ಕಥೆ ಇದೆ. ಇಂದ್ರಲೋಕದಲ್ಲಿರುವ ದೇವೇಂದ್ರನಿಗೆ ಯಾವಾಗಲೂ ತನ್ನ ಸಿಂಹಾಸನದ್ದೇ ಚಿಂತೆ. ಭೂಲೋಕದಲ್ಲಿ ಹೆಚ್ಚಿನ ಪುಣ್ಯ ಮಾಡಿದವರು ಇಂದ್ರಲೋಕಕ್ಕೆ ಹೋಗುತ್ತಾರೆ. ಅಲ್ಲಿ ರಂಭೆ, ಊರ್ವಶೀ, ತಿಲೋತ್ತಮೆ ಮೊದಲಾದ ಸುರಸುಂದರಿಯರು ಇರುತ್ತಾರೆ. ಭೂಲೋಕದಲ್ಲಿ ಸಿಗದ ಸುಖಸಂತೋಷಗಳು ಪುಣ್ಯಭಾಜನರಿಗೆ ಇಂದ್ರಲೋಕದಲ್ಲಿ ಸಿಗುತ್ತವೆ. ಹೆಚ್ಚಿನ ಪುಣ್ಯ ಮಾಡಿದವನು ಇಂದ್ರನೇ ಆಗಿ ಇಂದ್ರಲೋಕದ ಒಡೆಯನಾಗುತ್ತಾನೆ. ಅಲ್ಲಿರುವ ಸಿಂಹಾಸನವನ್ನೇರುತ್ತಾನೆ ಎಂಬ ನಂಬಿಕೆ ಪುರಾಣಗಳಲ್ಲಿ ಇದೆ. ಹೀಗಾಗಿ ಈಗ ಹಾಲೀ ಇಂದ್ರಲೋಕದ ರಾಜ್ಯಭಾರ ಮಾಡುತ್ತಿರುವ ದೇವೇಂದ್ರನಿಗೆ ಯಾವಾಗಲೂ ತನ್ನ ಸಿಂಹಾಸನದ್ದೇ ಚಿಂತೆಯಂತೆ. ಭೂಲೋಕದಿಂದ ತನಗಿಂತ ಹೆಚ್ಚಿನ ಪುಣ್ಯಭಾಜನರು ಬಂದು ಎಲ್ಲಿ ತನ್ನನ್ನು ಸಿಂಹಾಸನದಿಂದ ಉರುಳಿಸಿ ಕುಳಿತುಕೊಂಡುಬಿಡುತ್ತಾರೋ ಎಂಬ ಭಯವಂತೆ. ಈಗಿನ ನಮ್ಮ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮಂತ್ರಿಮಹೋದಯರಿಗೆ ತಮ್ಮ ಅಧಿಕಾರದ ಕುರ್ಚಿಯ ಕಾಲುಗಳನ್ನು ಯಾರು ಕೊಯ್ಯುತ್ತಾರೋ ಎಂಬ ಭಯವಿದ್ದಂತೆ! ಒಮ್ಮೆ ಭೂಲೋಕದಲ್ಲೊಬ್ಬ ಸ್ವರ್ಗದಲ್ಲಿ ಇಂದ್ರನ ಪಟ್ಟವನ್ನು ಪಡೆಯಲೋಸುಗ ಜ್ಯೋತಿಷ್ಟೋಮವೆಂಬ ಒಂದು ದೊಡ್ಡ ಯಾಗವನ್ನು ಮಾಡಲು ತೊಡಗಿದ್ದನಂತೆ. ಗುಪ್ತಚರರಿಂದ ಈ ವಿಷಯ ತಿಳಿದ ಇಂದ್ರನಿಗೆ ಸಹಜವಾಗಿ ಆತಂಕ ಉಂಟಾಯಿತು. ಯಾವುದೇ ರಾಜ್ಯದ/ದೇಶದ ಮುಖ್ಯಮಂತ್ರಿ/ಪ್ರಧಾನ ಮಂತ್ರಿಗಳಿಗೆ ತಮ್ಮ ಸರ್ಕಾರವನ್ನು ಉರುಳಿಸುವ ಸನ್ನಾಹ ಸ್ವಪಕ್ಷದವರಿಂದಲೋ ವಿಪಕ್ಷದವರಿಂದಲೋ ನಡೆಯುತ್ತಿದೆಯೆಂಬ ಒಳಸಂಚಿನ (dinner/breakfast politics) ಸುಳಿವು ಪೋಲೀಸ್‌ರವರಿಂದ ತಿಳಿದಂತೆ! ಇಂದ್ರ ತನ್ನ ಸಿಂಹಾಸನವನ್ನು ಉಳಿಸಿಕೊಳ್ಳಲು ಕೂಡಲೇ ಕಾರ್ಯಪ್ರವೃತ್ತನಾಗುತ್ತಾನೆ. ತನ್ನೆಲ್ಲ ಕಾರ್ಯಕ್ರಮಗಳನ್ನೂ ರದ್ದುಪಡಿಸಿ ದಿಢೀರನೆ ಧರೆಗಿಳಿದು ಬರುತ್ತಾನೆ. ತನ್ನ ಗಾದಿಯನ್ನು ಕಸಿದುಕೊಳ್ಳುವ ಸಲುವಾಗಿ ನಡೆಯುತ್ತಿದ್ದ ಆ ಜ್ಯೋತಿಷ್ಟೋಮ ಯಾಗದ ಯಜ್ಞಶಾಲೆಯನ್ನು ಹಂದಿಯ ರೂಪದಲ್ಲಿ ಪ್ರವೇಶಿಸಿ ಅದರ ಆವರಣದಲ್ಲೆಲ್ಲಾ ಹೊರಳಾಡಿ ಅಪವಿತ್ರಗೊಳಿಸಿಬಿಡುತ್ತಾನೆ. ರಾಜನು ಅದುವರೆಗೂ ಗಳಿಸಿದ್ದ ಯಾಗದ ಪುಣ್ಯವೆಲ್ಲಾ ಹಂದಿಯ ಅವಾಂತರದಿಂದ ಹಾಳಾಗಿ ಪರಿತಪಿಸುವಂತಾಗುತ್ತದೆ. ತಾನು ರೂಪಿಸಿದ ವಿಧ್ವಂಸಕ ಕೃತ್ಯವೆಲ್ಲಾ ಯಶಸ್ವಿಯಾಗಿ ನೆರವೇರಿದ ಮೇಲೆ ಇಂದ್ರ ತನ್ನ ಇಂದ್ರಲೋಕಕ್ಕೆ ಮರಳಿ ಹೋಗಬೇಕು ತಾನೆ? ಆದರೆ ಹಂದಿಯ

ಶರೀರದಲ್ಲಿ ಪರಕಾಯ ಪ್ರವೇಶ ಮಾಡಿದ್ದ ಇಂದ್ರನಿಗೆ ತಾನಾರೆಂಬುದು ತಿಳಿಯದಾಗುತ್ತದೆ. ಹತ್ತಿರದಲ್ಲಿಯೇ ಕಂಡು ಬಂದ ಒಂದು ಹೆಣ್ಣು ಹಂದಿಯನ್ನು ಮದುವೆಯಾಗುತ್ತಾನೆ. ನಾಲ್ಕಾರು ಮಕ್ಕಳಾಗುತ್ತವೆ. ಇತ್ತ ಎಷ್ಟು ದಿನಗಳಾದರೂ ಇಂದ್ರನು ಹಿಂತಿರುಗಿ ಬಾರದ ಕಾರಣ ಚಿಂತಾಕ್ರಾಂತರಾದ ರಂಭೆ, ಊರ್ವಶೀ ಮೊದಲಾದ ಸುರಸುಂದರಿಯರು ಅವನನ್ನು ಹುಡುಕಿಕೊಂಡು ಭೂಲೋಕಕ್ಕೆ ಬರುತ್ತಾರೆ. ಹಂದಿಯ ರೂಪದಲ್ಲಿದ್ದ ಇಂದ್ರನು ತನ್ನ ಪರಿವಾರದೊಂದಿಗೆ ತಿಪ್ಪೇಗುಂಡಿಯ ರೊಚ್ಚೆಯಲ್ಲಿ ಹೊರಳಾಡುತ್ತಾ ಇರುತ್ತಾನೆ. ಅವನನ್ನು ಗುರುತಿಸಿದ ಸುರಸುಂದರಿಯರು "ನೀನು ಹಂದಿಯಲ್ಲ, ದೇವೇಂದ್ರ; ಇಂದ್ರಲೋಕದಲ್ಲಿ ನಿನ್ನ ಸಿಂಹಾಸನ ಸುರಕ್ಷಿತವಾಗಿದೆ, ಯಾರೂ ಉರುಳಿಸಿಲ್ಲ, ಬಾ ವಾಪಾಸು ಹೋಗೋಣ" ಎಂದು ಪರಿಪರಿಯಾಗಿ ಕೇಳಿಕೊಂಡರೂ ಹಂದಿಯ ಶರೀರಧಾರಿಯಾದ ಇಂದ್ರ "ನನ್ನ ಹೆಂಡತಿ ಮಕ್ಕಳೊಂದಿಗೆ ನಾನು ಇಲ್ಲಿಯೇ ಸುಖವಾಗಿದ್ದೇನೆ, ಬರುವುದಿಲ್ಲ, ಹೋಗಿರಿ" ಎಂದು ಹೇಳಿದನಂತೆ! ಇದು ಯಾರ ಕಥೆಯೆಂದು ತಿಳಿದುಕೊಂಡಿದ್ದೀರಿ? ಇದು ಕೇವಲ ಇಂದ್ರನ ಕಥೆಯಲ್ಲ; ಈ ಲೋಕದ ಪ್ರತಿಯೊಂದು ಹೆಣ್ಣುಗಂಡಿನ ಕಥೆಯ ವ್ಯಥೆ !

18.6.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑